ನಾನು ಯಾವುದೇ ತರಹ ಅವಾಚ್ಯ ಶಬ್ದವಾಗಲಿ ಅಥರಾ ಬಂಧನದಲ್ಲಾಗಲಿ ಅಥರಾ ಯಾವುದೇ ಒಂದು ಕಾನೂನು ಬಾಹಿರ ಮಾತನ್ನಾಗಲಿ ಮಾತನಾಡಲಿಲ್ಲ, ಸುಮ್ಮನೆ ಕುಳಿತುಕೊಂಡೆ. ಅವರೊಡನೆ ಕೇಳಿದಾಗ ಉಪ ತಹಸೀಲ್ದಾರರೇ ನನ್ನ ಜೊತೆ ಉದ್ಧಟತನದಿಂದ ಮಾತನಾಡಿದರು. ಆ ಮೇಲೆ ಸಬ್ ಇನಸ್ಪೆಕ್ಟರ್ ಬಂದು ನೀವು ಎನಿದ್ದರೂ ತಹಸೀಲ್ದಾರರ ಮನೆಗ ಬರಬೇಕು ಎಂದು ಉದ್ಧಟತನದಿಂದ ಮಾತನಾಡಿದರು. ಇವ್ರೊತ್ತು ಈಗ ನನ್ನ ಮೇಲೆ ಸುಳ್ಳು ಕೇಸನ್ನು ಹಾಕಿದ್ದಾರೆ. ನನಗೆ ಇದನ್ನು ಹೇಳಲಿಕ್ಕೆ ತುಂಬಾ ನಾಚಿಕೆಯಾಗುತ್ತದೆ ಕುಂದಾಪುರ ತಾಲ್ಲೂಕಿನಲ್ಲಿ ಬಡ ಜನ ಬದುಕುವುದು ಬಹಳ ಕಷ್ಟವಾಗಿದೆ. ಬಜ ಜನರ ಮೇಲೆ ಅಗುವಂತಹ ಹಿಂಸೆ, ದೌರ್ಜನ್ಯ ನಾವು ನಿಜವಾಗಿ ನೋಡ್ದರೆ ಖಂಡಿತವಾಗಿ ಮನುಷ್ಯನ ಕಣ್ಣಿನಲ್ಲ ನೀರು ಬರುತ್ತದೆ, ಅವರು ಆ ಹೆಂಗಸಿಗೆ ಬೇರೆ ಮನೆ ಇದೆ ಎಂದು ಹೇಳುತ್ತಿದ್ದಾರೆ. ನಿಜವಾಗಿಯೂ ಆ ಹೆಂಗಸಿಗೆ ಬೇರೆ ಮನೆ ಇಲ್ಲಾ ಅದೇ ಮನೆಯಲ್ಲಿ ಅವರು ನಾಲ್ಕು ವರ್ಷದಿಂದ ವಾಸಿಸುತ್ತಿದ್ದಾರೆ. ಅದು ಅಲ್ಲದೆ ಈ ಸಬೆಗೆ ನಾನು ಹೇಳುತ್ತಿದ್ದೇನೆ ನಾನು ಯಾವುದೇ ತರಹ ಕಾನುನುನ್ನು ಕೈಯಲ್ಲಿ ತೆಗೆದುಕೊಂಡಿದ್ದೇ - ಆದರೆ - ಅಥವಾ ದುರ್ನಡತೆಯಿಂದ ಯಾವುದೇ ಒಂದು ಮಾತನಾಡಿದ್ದಿಲ್ಲಿ ಈ ಸಬೆಯ ಯಾವುದೇ ಶಿಕ್ಷೆಗೆ ಮನಾನು ತಾಯಾರಾಗಿದ್ದೇನೆ. ಆದರೆ ದೃರಾದೃಷ್ಟವಾಗಿ ಅವರೊಡನೆ ಕೆಲವು ಪುಡಾರಿಗಳು ಸೇರಿ ಕೊಂಡು ಈ ಭ್ರಷ್ಟ ಅದಿಕಾರಿನ್ನು ಸೇರಿಸಿಕೊಂಡು ನಮ್ಮ ಮೇಲೆ ಇವ್ರೊತ್ತು ಸುಳ್ಳು ಕೇಸ್‌ಗಳನ್ನು ಹಾಕಿದ್ದಾರೆ ಅದಕ್ಕಾಗಿ ನಾನು ಸಭಾಧ್ಯಕ್ಷರ ಹತ್ತಿರ ಕೇಳಿಕೊಳ್ಳುತ್ತಿದ್ದೇನೆ ನಾನು ಎಲ್ಲಿಯಾದರೂ ತಪ್ಪಾಗಿ ಅವಾಚ್ಯ ಶಬ್ದ ಅಥರಾ ತಪ್ಪನ್ನು ಮಾಡಿದ್ದರೆ ಇಲ್ಲಿ ಕೊಡುವ ಶಿಕ್ಷೆಗೆ ನಾನು ತಯಾರಾಗಿದ್ದೇನೆ ನಾನು ಯಾವುದೇ ಒಂದು ಸ್ವಾರ್ಥಕ್ಕಾಗಿ ಹೋಗಲಿಲ್ಲ, ಒಂದು ಹೆಂಗಸು ಯಾರಿಗೆ ಮಕ್ಕಳಿಲ್ಲ, ಹಣ ಇಲ್ಲ, ಮಾಸ ಇಲ್ಲ ಅವರ ಬಗ್ಗೆ ಮಾನವೀಯತೆ ದೃಷ್ಟಿಯನ್ನು ತೋರಿಸಲು ಹೋದಾಗ ಮಾನವೀಯತೆ ದೃಷ್ಟಿಯಿಂದ ನನ್ನ ಸಹಪಾಠಿಯಾದ ಶ್ರೀ ಸಭಾಪತಿಯಾವರು ಬಂದಿದ್ದರೆ ನಮ್ಮಿಬ್ಬರ ಮೇಲೆ ಕೇಸ್ ಹಾಕಿದ್ದಾರೆ. ನಾವು ಶಾಸಕರಾಗಿ ಏನು ಪ್ರಯೋಜನ? ಅಧ್ಯಕ್ಷರೇ, ನೀವು ಬಂದು ರಕ್ಷಣೆ ಕೊಡಬೇಕು, ಇದರಲ್ಲಿ ಸತ್ಯ ಸಂಗತಿ ಎನು ಇದೆ ಎಂಬುದು ಅಲ್ಲಿಯ ಎಲ್ಲಾ ಮುಗ್ಧ ಜನರಿಗೆ ಗೊತ್ತು ಯಾರ ತರಹದಲ್ಲಿ ಅವರಿಗೆ ನ್ಯಾಯ ಕೊಡಿಸುತ್ತೀರಿ....

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೇ, ಯಾವುದಾದರೊಂದು ಸಮಿತಿಗೆ ಕಳುಹಿಸಿಕೊಡಿ ಇನ್ನೇನು ನಾನು ಕೇಳುವುದಿಲ್ಲ, ಯಾವ ರೀತಿ ಅನ್ಯಾಯ ನಡೆಯುತ್ತಿದೆ ಇವರೇ ರೆವಿನ್ಯೂ ಅಧಿಕಾರಿಗಳನ್ನು ಯಾವ ರೀತಿ ಧರಣಿಗೆ ಕೂಡಿಸುತ್ತಾರೆ, ಯಾವ ಸ್ಥಿತಿಗೆ ತರುತ್ತಿದ್ದಾರೆ ಗೊತ್ತಾಗುತ್ತದೆ. ಇದನ್ನು ಸದನದ ಸಮಿತಿಗೆ ಕಳುಹಿಸಿ ರಿಪೋರ್ಟ್ ತರಿಸಿ ಕೊಳ್ಳಿ ಅವಾಗ ಯಾವ ರೀತಿ ಇವ್ರೊತ್ತು ರಾಜಕಾರಣ ನಡೆಯುತ್ತಿದೆ. ಅಧಿಕಾರ ದುರುಪಯೋಗ ಆಗುತ್ತಿದೆ ಎಂಬುದು ತಮ್ಮ ಗಮನಕ್ಕೆ ಬರುತ್ತದೆ.

ಅಧ್ಯಕ್ಷರು : ಸನ್ಮಾನ್ಯ ತಿಪ್ಪೇಸ್ವಾಮಿಯವರು ಅಬಕಾರಿ ಸಚಿವರು.

ಮಂತ್ರಿಗಳ ಹೇಳಿಕೆಗಳು

ಹುಣಸೂರು ತಾಲ್ಲೂಕು ಹಕ್ಕಿರಾಜಪುರದಲ್ಲಿ ಸಾರಾಯಿ ನಿಲ್ಲಿಸಿದ ಬಗ್ಗೆ ಪ್ರತಿಭಟನೆ

ಶ್ರೀ ತಿಪ್ಪೇಸ್ವಾಮಿ (ಅಬಕಾರಿ ಸಚಿವರು) : ಮಾನ್ಯ ಅಧ್ಯಕ್ಷರೇ ಈ ದಿನ ಬೆಳಗ್ಗೆ ನಮ್ಮ ವಿರೋಧ ಪಕ್ಷದ ನಾಯಕರಾದ ಸನ್ಮಾನ್ಯ ಯಡಿಯೂರಪ್ಪನವರು ಎತ್ತಿದಂತಹ ವಿಷಯ. ಹುಣಸೂರು ತಾಲ್ಲೂಕು ಪಕ್ಷಿರಾಜಪುರದಲ್ಲಿ ಸಾರಾಯಿ ನಿಲ್ಲಿಸಿದ್ದು ನಿಜ. ನಿಲ್ಲಿಸಿದಂತಹ ಸಂದರ್ಭದಲ್ಲಿ ನಮ್ಮ ಅಧಿಕಾರಿಗಳಿಗೆ ದೂರು ಬರುತ್ತದೆ.

ಮೋಹನ್ ರಾಮಸಿಂಗ್‌ರವರ ಮನೆಯಲ್ಲಿ ಸಾರಾಯಿ ಮಾರುತ್ತಿದ್ದರು, ಸಾರಾಯಿ ನಿಲ್ಲಿಸಿದ ಮೇಲೆ ನಮ್ಮ ಆಫೀಸರ್ಸ್‌ಗೆ ದೂರು ಬಂತು ಅವರ ಮನೆಯಲ್ಲಿ ಸಾರಾಯಿ ನಿಲ್ಲಿಸಿದ್ದಾರೆ. ಈಗ ಐ.ಎಂ.ಎಲ್, ಮಾರುತ್ತಿದ್ದಾರೆ ಎಂದು ದೂರು ಬಂತು. ತಾರೀಖು 4.8.1995ರಂದು ಮೂರು ಗಂಟೆಗೆ ತಮ್ಮ ಕಛೇರಿ ಬಿಟ್ಟು ಆ ಗ್ರಾಮಕ್ಕೆ ಸಾಯಂಕಾಲ ಐದು ಗಂಟೆ ಸುಮಾರಿಗೆ ಆ ಊರನ್ನು ತಲುಪಿದರು. ಆ ಊರು ತಲುಪಿ ಆ ಮೋಹನ್ ರಾಮಸಿಂಗ್‌ರವರ ಮನೆಯನ್ನು ತಪಾಸಣೆ ಮಾಡಿದಾಗ ನಮ್ಮ ಆಫೀಸರ್‌ಗಳಿಗೆ ಅವರ ಮನೆಯಲ್ಲ ಮೈಸೂರಿ ಟೈಗರ್ ಬ್ರಾಂಡಿಯ ಏಳು ಕ್ವಾರ್ಟರ್ ಬಾಟಲ್‌ಗಳು ಸುಗುತ್ತವೆ. ಈ ಮೋಹನ್‌ರಾಮ ಸಿಂಗ್‌ರವರ ಮಕ್ಕಳು ಅವಾಗ ಮನೆಯಲ್ಲಿ ಇರುವುದಿಲ್ಲ. ನಮ್ಮ ಅಧಿಕಾರಿಗಳು ತನಿಖೆ ಮಾಡಿ ಆ ಬಾಟಲ್‌ಗಳನ್ನು ತೆಗೆದುಕೊಂಡು ಬರುತ್ತಾ ಇರತಕ್ಕಂಥ ಸಂದರ್ಭದಲ್ಲಿ ಈ ಮೋಹನ್‌ರಾಮಸಿಂಗ್‌ರವರು ಮಕ್ಕಳಾಗಿತಕ್ಕಂಥ ಶಿವಶಂಕರ ಮತ್ತು ಮಲ್ಲೇಶ ಎಂಬುವರು ಬಂದು ನಮ್ಮ ಮನೆಯಲ್ಲ ನೀವು ಈ ತರಹ ಮಾಡಿದ್ದುದು ತಪ್ಪು ಎಂದು ಹೇಳಿದಾಗ ನಮ್ಮ ಅಧಿಕಾರಿಗಳಿಗೂ ಅವರಿಗೂ ಜಗಳ ಆಗುತ್ತದೆ. ಜಗಳ ಆದಂತಹ ಸಂದರ್ಭದಲ್ಲಿ ನಮ್ಮ ಅಧಿಕಾರಿಗಳು ಅವರಿಬ್ಬರನ್ನು ಕರೆದುಕೊಂಡು ಆಫೀಸಿಗೆ ಬರುತ್ತಾರೆ. ನಮ್ಮ ಕಾಯಿದೆ ಏನು ಹೇಳುತ್ತದೆ ಎಂದರೆ ಏಳು ಬಾಟಲ್ ಇಟ್ಟುಕೊಳ್ಳುವುದು ಶಿಕ್ಷಾರ್ಹವಲ್ಲಿ ಎಂದು. ಏಕೆಂದರೆ ಒಬ್ಬ ವ್ಯಕ್ತಿ ತನಗೆ ಬೇಕಾದಂತಹ ಕುಡಿತಕ್ಕೆ ಬೇಕಾದಷ್ಟು ಏಳು ಬಾಟಲ್ ತನಕ ಇಟ್ಟುಕೊಂಡರೆ ಅದು ಕಾನೂನು ಬಾಹಿರವಲ್ಲ. ಅದುದರಿಂದ ಆ ಮಕ್ಕಳನ್ನು ನಮ್ಮ ಆಫೀಸ್‌ಗೆ ಕರೆದುಕೊಂಡು ಬಂದು ಅವರು ತಪ್ಪು ಒಪ್ಪಿಕೊಂಡ ಮೇಲೆ ಈ ತರಹ ನೀವು ಮಾಡಕೂಡದು ಎಂದು ಮಾರ್ಗದರ್ಶನ ಹೇಳಿ ಇದು ಕಾನೂನು ಬಾಹಿರ ಇಲ್ಲದೇ ಇರುವುದರಿಂದ ಕೇಸ್ ಹಾಕದೇ ಅವರನ್ನು ಬಿಡುತ್ತಾರೆ.

(ಗೊಂದಲ)

ಶ್ರೀ ಹೆಚ್.ಎನ್. ನಂಜೇಗೌಡ : ಅದು ಹೇಗೆ ಸ್ವಾಮಿ? ಏಳು ಬಾಟಲ್ ಇಟ್ಟುಕೊಂಡರೆ ಕಾನೂನು ಬಾಹಿರ ಅಲ್ಲ ಎಂದು ಹೇಳುತ್ತೀರಿ, ಹಾಗಾದರೆ ಏಳು ಬಾಟಲ್ ಇಟ್ಟುಕೊಂಡಿದ್ದವರನ್ನು ಏಕೆ ಹಿಡಿದುಕೊಂಡು ಹೋದಿರಿ?

ಶ್ರೀ ವೈ. ರಾಮಕೃಷ್ಣ : ಅವರನ್ನು ಕರೆದುಕೊಂಡು ಹೋಗಿ ಎಲ್ಲಿ ಕೂಡಿ ಹಾಕಿದಿರಿ?

ಶ್ರೀ ತಿಪ್ಪೇಸ್ವಾಮಿ : ಅವರು ನಮ್ಮ ಆಫೀಸರ್ ಮೇಲೆ ಗಲಾಟೆ ಮಾಡಿದ್ದಕ್ಕೋಸ್ಕರ ಅವರನ್ನು ಕರೆದುಕೊಂಡು ಹೋಗಿ ತಮ್ಮ ಆಫೀಸ್‌ನಲ್ಲಿ ವಿಚಾರಣೆ ಮಾಡುತ್ತಾರೆ. ವಿಚಾರಣೆ ಮಾಡಿ ನಾವು ಈ ತರಹ ಮಾಡಕೂಡದು ಎಂದು ಹೇಳಿದಾಗ ಇ ಮೇಲೆ ನಾವು ಈ ತರಹ ಮಾಡುವುದಿಲ್ಲ ಎಂದು ಅವರು ಒಪ್ಪಿಕೊಂಡ ಮೇ ಅವರನ್ನು ವಾಪಸ್ಸು ಕಳುಹಿಸುತ್ತಾರೆ. ಅವರನ್ನು ಕಳುಹಿಸಿದ ಮೇಲೆ ದಿನಾಂ 8.8.1995 ಬಿ.ಜೆ.ಪಿ. ಅಧ್ಯಕ್ಷರು ನಮ್ಮ ಆಫೀಸ್‌ಗೆ ಹೋಗಿ ಇದನ್ನು ವಿಚಾರ ಮಾಡುತ್ತಾರೆ ಆ ವಿಚಾರ ಮಾಡುವಂತಹ ಸಂದರ್ಭದಲ್ಲಿ ಈ ಕೇಸ್ ಪೋಲೀ ಸ್ಟೇಷನ್‌ನಲ್ಲಿ ದಾಖಲೆ ಆಗಿದೆ. ದಾಖಲೆ ಆಗಿರತಕ್ಕಂಥ ಈ ಸಂದರ್ಭದಲ್ಲಿ ಇ ವಿಚಾರಣೆ ಆಗಿಲ್ಲ. ಇನ್ನೂ ತನಿಖೆ ಆಗಿಲ್ಲ. ತನಿಖೆ ನಡೆಯುತ್ತಿದೆ ಎಂದು ವರದಿ ಬಂದಿದೆ. ಆ ಗ್ರಾಮಕ್ಕೆ ಹೋಗಿ ನಮ್ಮ ವಿರೋಧ ಪಕ್ಷದ ನಾಯಕ ಹೇಳಿದ ಪ್ರತಕಾರ ಅಲ್ಲಿಯ ಗ್ರಾಮಸ್ಥರ ಮೇಲಗೆ ದೌರ್ಜನ್ಯ ಮಾಡಿದ್ದುಯ ನಿಜವಾಗಿದ್ದರೆ ಅಂಥವನನ್ನು ವಿಚಾರಣೆ ಮಾಡಿ ಆ ಒಂದು ವಿಚಾರಣೆಯಲ್ಲಿ ನಮ್ಮ ಅಧಿಕಾರಿಗಳು ತಪ್ಪತಸ್ಥರು ಎಂದು ತಿಳಿದು ಬಂದರೆ ಕಾನನ್ಯಾನು ಪ್ರಕಾರ ಅವರಿಗೆ ಕನೂನಿನ ಅಡಿಯಲ್ಲಿ ಅವರ ಮೇಲೆ ತಕ್ಕ ಕ್ರಮ ಜರುಗಿಸುತ್ತೇವೆ ಎಂದು ತಮ್ಮ ಮುಖಾಂತರ ವಿರೋಧ ಪಕ್ಷದ ನಾಯಕರಿಗೆ ನಾನು ತಿಳಿಸುವುದಕ್ಕೆ ಇಷ್ಟಪಡಿತ್ತೇನೆ.

(ಗೊಂದಲ)

ಶ್ರೀ ವೈ. ರಾಮಕೃಷ್ಣ : ಅವ್ರೊತ್ತು ರಾತ್ರಿ ಶಿವಶಂಕರ ಮತ್ತು ಮಲ್ಲೇಶರವರನ್ನು ಕರೆದು ಕೊಂಡು ಎಲ್ಲಿಟ್ಟಿರಿ ಲ್ಯಾಪೊರೊಟ್ರಿಯಲ್ಲಿ ಅವರನ್ನು ಹಿಡಿದುಬಿಟ್ಟು ಆಸ್ಪತ್ರೆಗೆ ಸೇರಿಸಿದ್ದಿರಾ? ಏಕೆ ಅದನ್ನು ಹೇಳುವುದಿಲ್ಲ? ಈಗ ನೀವೇ ಹೇಳುತ್ತಿದ್ದೀರಿ ವಿಳು ಬಾಟಲ್ ಇಟ್ಟಿದ್ದು ಕಾನೂನು ಬಾಹಿರ ಅಲ್ಲಿ ಎಂದು ಹೇಳುತ್ತೀರಿ, ಅವರು ಏನಾದರೂ ತಪ್ಪು ಮಾಡಿದರೆ ಕರೆದುಕೊಂಡು ಹೋಗಿ.....

(ಗೊಂದಲ)

ಶ್ರೀ ಸಿದ್ದರಾಮಯ್ಯ : ಈ ಪ್ರಕರಣದ ಬಗ್ಗೆ ನಾನು ಕೂಡ ಪೋಲೀಸ್‌ನವರ ಜೊತೆ ವಿಚಾರ ಮಾಡಿದ್ದೇನೆ. ಕೇಸ್ ರಿಜಿಸ್ಟರ್ ಆಗಿದೆ.

(ಗೊಂದಲ)

ಶ್ರೀ ಸಿದ್ದರಾಮಯ್ಯ : ನಾನು ಹೇಳುವುದಕ್ಕೆ ಮುಂಚೆನೇ ಗಲಾಟೆ ಮಾಡಿದರೆ ಹೇಗೆ ನಾನು ಹೇಳುವುದಕ್ಕೆ ಮುಂಚೆನೆ ಕೇಸನ್ನು ಯಾರು ಯಾರು ಮೇಲೆ ಹಾಕಿದ್ದಾರೆ ಎಂದು ಕೇಳಿದರೆ ನಾನೇನು ಹೇಳಲಿ. ಸ್ವಲ್ಪ ಇರಿ ನಾನು ಹೇಳುವುದನ್ನು ಸ್ವಲ್ಪ ಕೇಳಿ. ಆಮೇಲೆ ಅವರು ಹುಡುಗರುನ್ನು ಯಾರು ಹಿಡಿದಿಕೊಂಡು ಹೋದರೋ ಅವರ ಮೇಲೆ ಕಂಪ್ಲೇಂಟ್ ಕೊಟ್ಟಿದ್ದಾರೆ, ಪೋಲೀಸ್ ಸ್ಟೇಷನ್‌ನಬ್ಬ ಕಂಪ್ಲೇಂಟ್ ರಿಜಿಸ್ಟರ್ ಆಗಿದೆ ವಿಚಾರಣೆ ನಡೆಯುತಿದೆ ಯಾರು ತಪ್ಪಿತ್ಥರಿದ್ದಾರೆ ಅವರ ಮೇಲೆ ಕಾನೂನು ಪ್ರಕಾರವಾಗಿ ಕ್ರಮ ತೆಗೆದುಕೊಳ್ಳುತ್ತೇವೆ. ಇದು ನಾನು ವಿಚಾರಣೆ ಮಾಡಿರತಕ್ಕಂಥ ವರದಿ.

ಶ್ರೀ ಬಿ.ಎಸ್. ಯಡಿಯೂರಪ್ಪ : ಸನ್ಮಾನ್ಯ ಅಧ್ಯಕ್ಷರೇ, ಟಿ.ಎನ್. ಶೆಟ್ಟಿ ಎಂದು ಎಕ್ಸೈಸ್ ಇನಸ್ಪೆಕ್ಟರ್ ಗುರುಸಿದ್ಧಪ್ಪ ಎಂಬ ಎಕ್ಸೈಸ್ ಸಬ್ ಇನ್‌ಸ್ಪೆಕ್ಟರ್ ನಾಲ್ಕನೇ ತಾರೀಖು ರಾತ್ರಿ ಇಪ್ಪತ್ತು ಮೂವತ್ತು ಜನ ಗೂಂಡಾಗಳನ್ನು ಕರೆದುಕೊಂಡು ಹೋಗಿ ಮೂರು ಜನರ ಮೇಲೆ ಹಲ್ಲೆ ಮಾಡಿ ಆ ಹುಣಾಸೂರಿನಲ್ಲಿಯ ಮಿನಿ ವಿಧಾನಸೌಧದಲ್ಲಿ ಎಕ್ಸೈಸ್ ಕಛೇರಿಯಲ್ಲಿ ಅವರನ್ನು ಕೂಡಿ ಹಾಕಿ ಅವನನ್ನು ಬೂಟ್ಸ್‌ದಿಂದ ಹೊಡೆದು ಹಲ್ಲೆ ಮಾಡಿದರು. ಅವರು ಓಡಿ ಬಂದು ಊರಿನ ಜನಕ್ಕೆ ಹೇಳಿ ಊರಿನೀ ಜನ ಸತ್ಯಾಗ್ರಹ ಮಾಡಿ ಪೋಲೀಸ್ ಕಂಪ್ಲೇಂಟ್ ಕೊಟ್ಟರು.

ಸದದಲ್ಲಿ ಗಲಾಟೆ ಮಾಡಿದ ಮೇಲೆ ಇವ್ರೊತ್ತು ಪೋಲೀಸ್ ಅಲ್ಲಿಗೆ ಹೋಗಿದ್ದಾರೆ. ಅಂದರೆ ಸದನ ನಡೆಯುತ್ತಾ ಇರಬೇಕಾದರೆ ಸನ್ಮಾನ್ಯ? ಸಚಿವರು ಹೇಳಿದಂತೆ 7 ಬಾಟಲನ್ನು ಮನೆಯಲ್ಲ ಇಟ್ಟುಕೊಂಡದ್ದಲ್ಲ ಕಾರಣ. ಊರಿನಲ್ಲಿ ಹೋರಾಟ ಸ್ವಾಮಿ. ನನಗೆ ಏನು ದುಃಖವಾಗುತ್ತಿರುವುದು ಎಂದರೆ ಇವ್ರೊತ್ತು ಪರಿಶೀಲನೆ ಮಾಡಿ ಕಳೆದ 6 ತಿಂಗುಗಳಿಂದಜ ಆ ಊರಿನಲ್ಲ ಇರುವ 40-50 ಗ್ರಾಮನ ಸೇರಿ ಒಂದು ಮಾದರಿ ಗ್ರಾಮವಾಗಿದೆ, ಅಲ್ಲಿ ಹೆಂಡ ಶರಾಬು ಇಡಬಾರದು ಎಂದು ಹೋರಾಟ ಮಾಡುತ್ತಿದ್ದಾರೆ. ಸರ್ಕಾರಕ್ಕೆ ಮನವಿ ಕೊಟ್ಟಿದ್ದಾರೆ. ಇದಾದ ಮೇಲೂ ಕೂಡ ಚೀಫ್‌ಗಳಲ್ಲಿ ಹೆಂಡ ಶರಾಬು ತೆಗೆದುಕೊಂಡು ಹೋಗುತ್ತಿದ್ದಾಗ ಜೀಪನ್ನು ತಡೆದುದ್ದರಿಂದ ನೀವು ತಡೆದು ಹೇಗೆ ಬದುಕಿಕೊಳ್ಳುತ್ತೀರಿ ಮಕ್ಕಳಾ ಎಂದು ಹೇಳಿಬಿಟ್ಟು ಸೂರತ್ ಸಿಂಲಗ್ ಎನ್ನುವಂತವರನ್ನು ಹೊಡೆದು ಜೀಪಿನಲ್ಲಿ ಹಾಕಿಕೊಂಡಾಗ ಅವರ ಮಗ ಶಿವಶಂಕರ್ ಮತ್ತು ಮಲ್ಲೇಶಿ ಬಂದರು. ಅವನನ್ನು ಹೊಡೆದರು ಇವರಿಬ್ಬರನ್ನೂ ಕರೆದುಕೊಂಡು ಹುಣಸೂರಿನಲ್ಲಿ ಕೂಟಿಹಾಕುತ್ತಾರೆ. ಇಂತಹ ಅಮಾನ್ಯ ಕೃತ್ಯ ಹಲ್ಲೆ ಆಗಿದೆ ಪಾನನಿಷೇದ ಜಾರಿಗೆ ತರಬೇಕು ಎನ್ನುತಕ್ಕಂಥ ಕಾಲದಲ್ಲಿ ಆ ಅಧಿಕಾರಿ ಕಾನೂನನ್ನು ಕೈಗೆ ತೆಗೆದುಕೊಂಡಿರತಕ್ಕಂಥ ಸಂದರ್ಭದಲ್ಲಿ ಈ ಎಕ್ಸೈಸ್ ಸಬ್‌ಇನ್ಸ್‌ಪೆಕ್ಟರ್ ಮೇಲೆ ಕ್ರಮ

ತೆಗೆದುಕೊಂಡು ಸಸ್ಪೆಂಡ್ ಮಾಡಿ ಮುಂದಿನ ಕ್ರಮ ತೆಗೆದುಕೊಳ್ಳುತ್ತೇವೆ ಎಂದು ಹೇಳುವುದನ್ನು ಬಿಟ್ಟು ಇವ್ಹೋತ್ತು ಏಳು ಬಾಟಲನ್ನು ಇಟ್ಟು ಆದರೆ ತೆಗೆದು ಕೊಂಡಿದ್ದಾರೆ ಎಂದು ನೆಪಹೇಳಿ ಈ ರೀತಿ ಮಾಡಿದ್ದಕೆ ಅಲ್ಲವೆ? ಅವನು ಹೇಗೆ ಮುಟ್ಟುತ್ತಾನೆ? ಅವರನ್ನು ಇವ್ಹೋತ್ತು ಸ್ಥಳದಲ್ಲೇ ಸಸ್ಪೆಂಡ್ ಮಾಡಬೇಕು. ಅಂದರೆ ಕ್ರಮ ತೆಗೆದುಕೊಳ್ಳಬೇಕು. ಆ ಹೆಂಡದ ಕಂಟ್ರಾಕ್ಟರ್ ಗೂಂಡಾಗಳನ್ನು ಕರೆದುಕೊಂಡು ಹೋಗಿ ಹರಿಜನ-ಗಿರಿಜನರ ಮೇಲೆ ಹಲ್ಲೆ ಮಾಡಿಸಿದ್ದಾನೆ ಅವನ ಲೈಸನ್ಸ್‌ನ್ನು ಕ್ಯಾನ್ಸಲ್ ಮಾಡಿಸಬೇಕು. ಇದುನಮ್ಮ ಬೇಡಿಕೆ. ಆಗುತ್ತೋ ಇಲ್ಲವೋ ಎಂಬುದನ್ನು ತಾವು ಹೇಳಿ ಇಲ್ಲದೇ ಇದ್ದರೆ ನಮ್ಮ ದಾರಿ ನಮಗೆ ನಿಮ್ಮ ದಾರಿ ನಿಮಗೆ ನಿಮಗೆ ಜವಾಬ್ದಾರಿ ಇಲ್ಲ ಹರಿಜನಕ್ಕೆ ರಕ್ಷಣೆ ಕೊಡುವುದಕ್ಕೆ ಆಗುವುದಿಲ್ಲ.....

(ಗೊಂದಲ)

ಶ್ರೀ ತಿಪ್ಪೇಸ್ವಾಮಿ : ಸನ್ಮಾನ್ಯ ಅಧ್ಯಕ್ಷರೇ, ಇವ್ಹೋತ್ತು ನನಗೆ ಬಂದರತಕ್ಕಂಥ ಮಾಹಿತಿ ಪ್ರಕಾರ ನಾನು ಇವ್ಹೋತ್ತು ಇಲ್ಲಿ ಹೇಳಿದ್ದೇನೆ. ನಾನೇ ಖುದ್ದು ಗ್ರಾಮಕ್ಕೆ ಹೋಗಿ ಪರಿಶೀಲನೆ ಮಾಡಿ ಅದು ಏನು ಕ್ರಮ ಜರುಗಿದೆ ವಿಮರ್ಶೆ ಮಾಡಿದ ಮೇಲೆ ಕ್ರಮ ತೆಗೆದುಕೊಳ್ಳುತ್ತೇನೆ. ಇದರಲ್ಲಿ ಸದನಕ್ಕೆ ಪ್ರಾಮಾಣಿಕವಾದ ನ್ಯಾಯವನ್ನು ಒದಗಿಸುವುದಕ್ಕೆ ಪ್ರಾಮಾಣಿಕವಾಗಿ ಪ್ರಯತ್ನ ಮಾಡುತ್ತೇನೆ.

(ಗೊಂದಲ)

5.00 ಪಿ.ಎಂ

MR. SPEAKER : You were a Minister. I want to know when the Hon. Minister says 'I will visit the spot and I will report to the house, 1 what else you want me to do?

(ಈ ಹಂತದಲ್ಲೇ ಬಿ.ಜೆ.ಪಿ. ಸದಸ್ಯರು ಸರ್ಕಾರದ ವಿರುದ್ಧಿಕಾರ ಎಂದು ಕೂಗುತ್ತಾ ಸಭಾತ್ಯಾಗ ಮಾಡಿದರು)

(2) ದ.ಕ. ಜಿಲ್ಲೆಯಲ್ಲಿ ಹೆಣ್ಣುಮಗಳ ಮನೆ ನೆಲಸಮ

ಶ್ರೀ ಆರ್.ಎಲ್. ಜಾಲಪ್ಪ (ಕಂದಾಯ ಸಚಿವರು) : ಸನ್ಮಾನ್ಯ ಅಧ್ಯಕ್ಷರೇ. ಅದೇ ರೀತಿ ಇದ್ದರೆ ಚೆನ್ನಾಗಿರುತ್ತದೆ. ಅವರುಗಳ ವರ್ತನೆ ಏನು ಎಂಬುದು ಗೊತ್ತಾಗುತ್ತದೆ.

ಸನ್ಮಾನ್ಯ ಸಭಾಪತಿಯವರು ಮತ್ತು ಜಯರಾಮಶೆಟ್ಟರು ಏನು ಹೇಳಿದ್ದಾರೆ ಅದರ ಬಗ್ಗೆ ಹೇಳುತ್ತೇನೆ. ಕಮಲಾ ಮೆಹಂತಿ ಎನ್ನುವವರು ಬಾಡಿಗೆ ಮನೆಯಲ್ಲಿ ವಾಸವಿದ್ದರು. ಅವರಿಗೆ ಸರ್ವೆ ನಂ 89 ರೊಳಗೆ ಪಾರ್ಟ್ ನಂ. 302:6ರಲ್ಲಿ ಒಂದು ಆಶ್ರಯ ಸೈಟ್ ಕೂಡ ಕೊಡಲ್ಪಟ್ಟಿತು. ಆದರೆ ಅವರು ಅಲ್ಲಿಗೆ ಹೋಗಲಿಲ್ಲ, ಈ ಸಾರ್ವಜನಿಕರ ಉಪಯೋದಕ್ಕಾಗಿ ಕಾಯ್ದಿರಿಸಿದ್ದ ಸರ್ವೇ ನಂ. 107.17ರಲ್ಲಿ ಖಾಯಂ ಆ ಮನೆ ಕಟ್ಟುವುದಕ್ಕೆ ಪ್ರಯತ್ನಪಟ್ಟರು, ಅವರಿಗೆ ನೋಟೀಸ್ ಕೊಟ್ಟರೆ ನೋಟೀಸ್ ತೆಗೆದುಕೊಳ್ಳಲಿಲ್ಲ, ಬಾಯಲ್ಲಿ ಹೇಳಿದರೂ ಕೂಡ ಮನೆ ಕಟ್ಟುವುದನ್ನು ನಿಲ್ಲಿಸಲಿಲ್ಲ, ಆದ್ದರಿಂದ ಅಧಿಕಾರಿಗಳು ಆ ಮನೆಯನ್ನು ಕಿತ್ತು ಹಾಕಿದ್ದಾರೆ. ಜೊತೆಗೆ ಆ ಜಮೀನನ್ನು ಈ ಕಾಲಿ ಸಹಕಾರ ಸಂಘದವರು ಕೇಳಿದ್ದರು. ಇದು ಆಗಿದ್ದು 02-08-95ರಲ್ಲಿ, ದಿನಾಂಕ 03-08-95ರಲ್ಲಿ ಸನ್ಮಾನ್ಯ. ಜಯರಾಮಶೆಟ್ಟರು ಅಲ್ಲಿಗೆ ಹೋದರು. ರೆವಿನ್ಯೂ ಆಫೀಸರ್ಸ್ ಎಲ್ಲಿ ಅವರ ಬರಬೇಕು ಎಂದು ಹೇಳಿದರು. ರೆವಿನ್ಯೂ ಆಫೀಸರ್ಸ್. ರೆವಿನ್ಯೂ ಇನ್ಸ್‌ಪೆಕ್ಟರ್ ಮತ್ತು ವಿಲೇಜ್ ಆಕೌಂಟೆಂಟ್ ಅವರೆಲ್ಲಾ ಬಂದಾಗ ಆಗ ಆಫೀಸ್‌ನಲ್ಲಿ